ಆಶ್ಚರ್ಯವಾಗುತ್ತದಲ್ಲವೆ? ಈ ವಿದ್ಯೆ ಇವನಿಗೆ ಇವನ ತಂದೆಯಿಂದ ಬಂದ ಬಳುವಳಿ. ಬಂಗಲಿ ರಂಗೇಗೌಡನ ತಂದೆ ಬಂಗಲಿ ನಂಜೇಗೌಡ ಅರಮನೆಯ ಅಡಿಗೆ ಭಟ್ಟರಿಗೆ ಕಸ – ಮುಸುರೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದ. ಆಗ ಈಗ ಅಡಿಗೆ ಕೆಲಸದಲ್ಲೂ ನೆರವಾಗುತ್ತಿದ್ದ. ಇದನ್ನೇ ಮುಂದುವರೆಸಿದ ನಂಜೇಗೌಡನೂ ರುಚಿ ಕಟ್ಟಾದ ಅಡಿಗೆ ಮಾಡುವುದನ್ನು ಕಲಿತ. ಕಾಡ ಸೋಲಿಗರಿಗೆ ಪರಿಚಯವಿರುವ ಸಾಂಬಾರು ಪದಾರ್ಥಗಳು ಎಂದರೆ ಕಾಡಿನ ಅರಿಸಿನ, ಕಾಡು ಕರಿಬೇವು, ಕಾಡು ಕೊತ್ತಂಬರಿ – ಮೆಣಸಿನಕಾಯಿ ಇಷ್ಟೆ! ಕಾಡಿನ ಕರಿಬೇವು ನಾವು ಉಪಯೋಗಿಸುವ ಕರಿಬೇವಿನಂತೆಯೇ ಕಂಡರೂ ಅದರ ಘಮಲೆ ಬೇರೆ. ಕಾಡಅರಿಸಿನಕ್ಕೂ ವಿಶೇಷ ಕೇಸರಿ ಬಣ್ಣ ಮತ್ತು ಪರಿಮಳವಿರುತ್ತದೆ. ಕಾಡು ಕೊತ್ತಂಬರಿ ಎಂಬುದಕ್ಕೂ ನಾವು ಉಪಯೋಗಿಸುವ ಕೊತ್ತಂಬರಿಗೂ ಏನೇನೂ ಸಂಬಂಧವಿಲ್ಲ. ಕಾಡುಕೊತ್ತಂಬರಿ ಒಂದು ವಿಶೇಷ ಘಮಲಿನ ಸೊಪ್ಪು. ಇದಲ್ಲದೆ ಕಾಡ ಜೀರಿಗೆಯೂ ಒಂದು ವಿಶೇಷವಾದ ಪದಾರ್ಥ. ನಮ್ಮ ಮಾಮೂಲಿ ಜೀರಿಗೆಗಿಂತ ಸಣ್ಣದಾಗಿದ್ದರೂ ಈ ಕಪ್ಪನೆಯ ಕಾಳಿನ ಘಮಲು ಅದ್ವಿತೀಯ. ಪ್ರಯೋಗಶೀಲನಾದ ರಂಗೇಗೌಡ ಈ ಕಾಡಿನ ಘಮಲಿನ ಪದಾರ್ಥಗಳನ್ನು ನಾಡಿನ ರುಚಿಯೊಡನೆ ಬೆರೆಸಿ ವಿಶೇಷ ತಿಳಿಸಾರಿನ ಪಾಕ ಇಳಿಸುವ ಕಲೆಯನ್ನು ಕರಗತ ಮಾಡಿಕೊಂಡ. ಮೈಸೂರು ಮಹಾರಾಜರಿಗೆ ಹೊಸ ರುಚಿಗಳಲ್ಲಿ ವಿಶೇಷ ಆಸಕ್ತಿ. ಹಾಗಾಗಿ ಅವರಿಗೆ ನಮ್ಮ ಬಂಗಲಿ ರಂಗೇಗೌಡನ ಅಡಿಗೆ ಬಹಳ ಹಿಡಿಸಿತು. ರಂಗೇಗೌಡನಿಗೆ ನೌಕರಿ ಕಾಯಂ ಮಾಡಿ ಹನ್ನೆರಡುವರೆ ರೂಪಾಯಿ ಸಂಬಳ ಕೂಡ ಕೊಡುತ್ತಿದ್ದರು. ಮಹಾರಾಜರು ಬೆಟ್ಟಕ್ಕೆ ಬರುವುದು ಕಡಿಮೆಯಾದ ಮೇಲೆ, ಕಾಲಾನಂತರ ಅವರ ಬಂಗಲೆ ಪಿ.ಡಬ್ಲ್ಯು.ಡಿ ಇಲಾಖೆಗೆ ಸೇರಿ ಐ.ಬಿ. ಅಥವಾ ಇನ್‌ಸ್ಪೆಕ್ಷನ್ ಬಂಗ್ಲೆ ಆಯಿತು. ರಂಗೇಗೌಡನಿಗೆ ಐಬಿಯಲ್ಲೆ ಕೆಲಸ ಕಾಯಂ ಆಯಿತು.

ಮಸಣಮ್ಮನಿಗೆ ತನ್ನ ಮಾವ ನಂಜೇಗೌಡರ ಬಗ್ಗೆ ಬಹಳ ಗೌರವ. ತನ್ನ ಅತ್ತೆ, ಮಾವ, ಗಂಡ ಇವರನ್ನು ನೆನೆಸಿಕೊಂಡು "ಓ ಈಗ ಅವರೆಲ್ಲ ಎಲ್ಲಿ ಅವರೆ, ಸತ್ತು ಕೆಟ್ಟು ಹೋಗು ಬುಟ್ರು ಸ್ವಾಮೀ' ಎಂದು ನಿಟ್ಟುಸಿರು ಬಿಡುತ್ತಿದ್ದಳು. ಈಗ ಮಸಣಮ್ಮ ತನ್ನ ಮಗಳು, ಮೊಮ್ಮಗಳು – ಮರಿಮಕ್ಕಳ ಜೊತೆ ಸಣ್ಣ ಹೆಂಚಿನ ಮನೆಯಲ್ಲಿ ವಾಸವಾಗಿದ್ದಾಳೆ. ಮೊಮ್ಮಗಳು ಇವಳ ಮನೆ ಎದುರಿಗೆ ಒಂದು ಪ್ರತ್ಯೇಕ ಮನೆಮಾಡಿಕೊಂಡು ತನ್ನ ಮಕ್ಕಳೊಡನೆ ಇದ್ದಾಳೆ. ನಮ್ಮನ್ನು ಮಸಣಮ್ಮ ಕಂಡದ್ದೇ ತಡ "ಓ ದಣಿಗಳು ಬಂದವ್ರೆ; ಬನ್ನಿ ಸ್ವಾಮಿ'' ಎಂದು ತನ್ನ ಎರಡೂ ಕೈಗಳನ್ನು ಎತ್ತಿ ಶಿರಬಾಗಿ ನಮಸ್ಕರಿಸಿದಳು. ಮೊಮ್ಮಗಳು ಜಗುಲಿಯ ಮೇಲೆ ಚಾಪೆ ಹಾಸಿ ನಮ್ಮನ್ನು ಕೂರಲು ಹೇಳಿದಳು. ಕೆಲವು ನಿಮಿಷಗಳಲ್ಲೆ ಹೆರಳೇಕಾಯಿ ಪಾನಕವನ್ನು ಗಾಜಿನ ಲೋಟದಲ್ಲಿ ಹಾಕಿ ತಂದು ಕೊಟ್ಟಳು. ಮಸಣಮ್ಮನನ್ನು "ಅಜ್ಜಿ ನೀನೂ ಚಾಪಮೇಲೆ ಬಾ'' ಎಂದೆ, ''ಬೇಡ ಸಾಮಿ ನೀವು ದಣಿಗಳು ನಾನು ಇಲ್ಲೇ ನೆಲದ ಮೇಲೇ ಕುಂತ್ಕಾತೀನಿ'' ಎಂದಳು. ಮಹಾರಾಜರ ವಿಷಯ ಕೇಳಲು ಬಂದಿದ್ದೇವೆ ಎಂದು, ತಿಳಿದದ್ದೇ ತಡ ಅವಳ ಮನಸ್ಸಿನಲ್ಲಿ ಶ್ರೀ ಮನ್ಮಹಾರಾಜರ ನೆನಪುಗಳ ಜೊತೆ ಭಕ್ತಿ ಭಾವ – ಗೌರವಗಳು ಎಚ್ಚರವಾಗಿ ಬಿಟ್ಟವು. "ಆ ಮಾಸಾಮಿಯವರು ತಾನೆ ನಮ್ಮನ್ನೆಲ್ಲ ಸಾಕಿದ್ದು; ನಾವು ಕಾಡ ಸೋಲಿಗರು, ಕಾಡಿನಲ್ಲಿ ಸೊಪ್ಪು – ಗೆಣಸು ತಿಂದು ಬದುಕುತೀವಿ, ಈಟಗಲ ನೆಲದಲ್ಲಿ ರಾಗಿ ಬೆಳೆದು, ಎಡ್ಡ ಬೆಳೆದು ತಿಂಬದು, ನಮಗೆ ಅನ್ನ ಅಂದರೆ ಏನೂ ಅಂತ ಗೊತ್ತ? ಮಾರಾಜರು ತಾನೆ ನಮಗೆಲ್ಲ ಅಕ್ಕಿ ತೋರಿದ್ದು" ಎಂದು ಸೋಲಿಗರಿಗೆ ಅಕ್ಕಿ – ಅನ್ನ ಪರಿಚಯವಾದದ್ದನ್ನು ಕುರಿತು ಹೇಳಿದಳು. ''ನಿನ್ನ ಗಂಡ ಮಾರಾಜರಿಗೆ ಅಡಿಗೆ ಮಾಡುವಾಗ ನೀನು ಏನು ಮಾಡ್ತಾ ಇದ್ದೆ'' ಎಂದು ಕೇಳಿದೆ. "ಇನ್ನೇನ ಮಾಡಾದು, ಕಸ – ಮುಸುರೆ ತರಕಾರಿ ಇಂಗೆ ಅದು – ಇದೂ ಕೆಲಸ ಮಾಡ್ತಾ ಇದ್ದೆ'' ಎಂದಳು. ಹೀಗೆ ಗಂಡನಿಗೆ ಅಡಿಗೆ ಕೆಲಸದಲ್ಲಿ ಸಹಾಯ ಮಾಡ್ತಾ ಮಹಾರಾಜರನ್ನು ಅತ್ಯಂತ ಹತ್ತಿರದಿಂದ ಕಂಡಿದ್ದಳು ನಮ್ಮ ಮಸಣಮ್ಮ.